# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 431 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ತಿಪ್ಪಣ್ಣಪ್ಪ ಕಮಕನೂರು (ವಿಧಾನ ಸಭೆಯಿಂದ ಚುನಾಯಿತರಾದವರು |
| ಉತ್ತರಿಸಬೇಕಾದ ದಿನಾಂಕ | 13.08.2025 |
| ಉತ್ತರಿಸುವ ಸಚಿವರು | ಲೋಕೋಪಯೋಗಿ ಇಲಾಖಾ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಲ್ಯಾಣ-ಕರ್ನಾಟಕ ಭಾಗ ದಲ್ಲಿ ಲೋಕಾಯುಕ್ತವು ಎಷ್ಟು ಜನ ಲೋಕೋಪಯೋಗಿ ಇಲಾಖಾಧಿಕಾರಿಗಳ ಮೇಲೆ ದಾಳಿ ನಡೆಸಿದ್ದಾರೆ:(ವಿವರ ಒದಗಿಸುವುದು) | ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡ 05 ಅಧಿಕಾರಿಗಳ ಮೇಲೆ ಬಲ್ಲಮೂಲಗಳಿಗಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ಮಾನ್ಯ ಲೋಕಾಯುಕ್ತ ಸಂಸ್ಥೆಯಿಂದ ದಾಳಿಯಾಗಿದ್ದು, ವಿವರಗಳು ಈ ಕೆಳಕಂಡಂತಿವೆ:-<br>1. ಶ್ರೀ ಸುರೇಶ್ ಮೇದಾ, ಅಧೀಕ್ಷಕ ಇಂಜಿನಿಯರ್, ಗುಣ ಭರವಸೆ ವೃತ್ತ, ಕಲಬುರಗಿ.<br>2. ಶ್ರೀ ವಿಶ್ವನಾಥ ರೆಡ್ಡಿ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್.<br>3. ಶ್ರೀ ಜಿ.ಎನ್.ಪ್ರಕಾಶ್, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್.<br>4. ಶ್ರೀ ಅಮೀನ್ ಮುಕ್ತಾರ್ ಅಹ್ಮದ್, ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ವೃತ್ತ, ಬಳ್ಳಾರಿ.<br>5. ಶ್ರೀ ವಿಜಯಕುಮಾರ್, ಸ.ಇಂ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಗಂಗಾವತಿ<br>6. ಶ್ರೀ ಸುರೇಶ್ ಮೋರೆ, ಕಿ.ಇಂ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಬಸವ ಕಲ್ಯಾಣ, ಬೀದರ್ |
| ಆ | ದಾಳಿಯಲ್ಲಿ ದೊರೆತ ಅಕ್ರಮ ಸಂಪತ್ತೆಷ್ಟು | (see table below) |

| ಅಧಿಕಾರಿಗಳ ಹೆಸರು | ಅಕ್ರಮ ಆಸ್ತಿಯ ವಿವರ |
|---|---|
| 1. ಶ್ರೀ ಸುರೇಶ್ ಮೇದಾ, ಅಧೀಕ್ಷಕ ಇಂಜಿನಿಯರ್, ಗುಣಭರವಸೆ ವೃತ್ತ, ಕಲಬುರಗಿ. | ರೂ.3,72,65,083/- |
| 2. ಶ್ರೀ ವಿಶ್ವನಾಥ ರೆಡ್ಡಿ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯಾದಗಿರಿ. | ರೂ.1,81,83,595/- |
| 3. ಶ್ರೀ ಜಿ.ಎನ್.ಪ್ರಕಾಶ್, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ರಾಯಚೂರು. | ರೂ.2,75,08,806/- |
| 4. ಶ್ರೀ ಅಮೀನ್ ಮುಕ್ತಾರ್ ಅಹ್ಮದ್, ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ವೃತ್ತ, ಬಳ್ಳಾರಿ. | ರೂ.3,24,50,000/- |
| 5. ಶ್ರೀ ವಿಜಯಕುಮಾರ್, ಸ.ಇಂ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಗಂಗಾವತಿ | ರೂ.99,80,000/- |
| 6. ಶ್ರೀ ಸುರೇಶ್ ಮೋರೆ, ಕಿ.ಇಂ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಬಸವ ಕಲ್ಯಾಣ, ಬೀದರ್ | ರೂ.71,44,457/- |

| | | |
|---|---|---|
| ಇ | ದಾಳಿಗೊಳಗಾದ ಅಧಿಕಾರಿಗಳ ಮೇಲಿನ ತನಿಖೆ ಯಾವ ಹಂತದಲ್ಲಿದೆ; ಮತ್ತು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? | ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮದ ವಿವರಗಳನ್ನು ಅನುಬಂಧದಲ್ಲಿ ಒದಗಿಸ ಲಾಗಿದೆ. |

ಲೋಇ 466 ಸೇಇವಿ 2025

(ಸತೀಶ ಜಾರಕಿಹೊಳಿ)
ಮಾನ್ಯ ಸಚಿವರು
ಲೋಕೋಪಯೋಗಿ ಇಲಾಖೆ

# <u>ಅನುಬಂಧ</u>

| | |
|---|---|
| 1 | ಶ್ರೀ ಸುರೇಶ ಮೇಧಾ, ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಇವರು ನಿಯೋಜನ ಮೇರೆಗೆ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಬೀದರ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಅವರ ಬಲ್ಲ ಮೂಲಗಳಿಗಿಂತ ಹೆಚ್ಚಿನ ಅಕ್ರಮ ಆಸ್ತಿ ಹೊಂದಿರುವ ಆರೋಪದ ಸಂಬಂಧ ಬೀದರ್ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಾಖಲಾದ ಮೊಕದ್ದಮೆ ಸಂಖ್ಯೆ:04/2023ರ ಮೇರೆಗೆ ನಡೆಸಿದ ಲೋಕಾಯುಕ್ತ ದಾಳಿ ಪ್ರಕರಣದಲ್ಲಿ ಸದರಿಯವರನ್ನು ಸರ್ಕಾರಿ ಸೇವೆಯಿಂದ ಸರ್ಕಾರದ ಆದೇಶ ಸಂಖ್ಯೆ:ಲೋಇ 212 ಸೇಇವಿ 2023, ದಿನಾಂಕ:08.08.2023ರಂದು ಅಮಾನತ್ತುಗೊಳಿಸಲಾಗಿರುತ್ತದೆ. |
| 2 | ಶ್ರೀ ವಿಶ್ವನಾಥರೆಡ್ಡಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಮತ್ತು ಕಲ್ಯಾಣ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು(ನಿಯೋಜನೆ) ಇವರ ವಿರುದ್ಧ ಅವರ ಬಲ್ಲ ಮೂಲಗಳಿಗಿಂತ ಹೆಚ್ಚಿನ ಅಕ್ರಮ ಸಂಪತ್ತು ಹೊಂದಿರುವ ಆರೋಪದಡಿ ಯಾದಗಿರಿ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:02/2023ಕಲಂ 13(1)(ಬಿ) ಸಹಿತ 13(2) ಪಿ.ಸಿ.ಆಕ್ಟ್-1988(ತಿದ್ದುಪಡಿ ಕಾಯ್ದೆ 2018)ರ ರಿತ್ಯಾ ದಿನಾಂಕ: 27.06.2023ರಂದು ಪ್ರಕರಣ ದಾಖಲಿಸಿಕೊಂಡು ನಡೆಸಿದ ದಾಳಿ ಪ್ರಕರಣದಲ್ಲಿ ಸದರಿಯವ ರನ್ನು ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ / ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಸರ್ಕಾರದ ಆದೇಶ ಸಂಖ್ಯೆ:ಲೋಇ 341 ಸೇಇವಿ 2023, ದಿನಾಂಕ:07.09.2023ರಂದು ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ. |
| 3 | ಶ್ರೀ ಜಿ.ಎನ್.ಪ್ರಕಾಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಉಪ ವಿಭಾಗ ರಾಯಚೂರು ಇವರು ಅವರ ಬಲ್ಲ ಮೂಲಗಳಿಂದ ಹೆಚ್ಚಿನ ಅಕ್ರಮ ಆಸ್ತಿ ಹೊಂದಿರುವ ಆರೋಪದಡಿ ಲೋಕಾಯುಕ್ತ ದಾಳಿ ಪ್ರಕರಣದಲ್ಲಿ ಅವರ ವಿರುದ್ಧ ರಾಯಚೂರು ಲೋಕಾಯುಕ್ತ ಪೊಲೀಸ್ ಠಾಣೆ ಇಲ್ಲಿ ಕಲಂ-13(1)(ಬಿ) ಜೊತೆ 13(2) ಪಿ.ಸಿ.ಆಕ್ಟ್ 1988(ತಿದ್ದುಪಡಿ ಕಾಯ್ದೆ 2018)ರ ಮೇರೆಗೆ ದಾಖಲಾದ ಮೊಕದ್ದಮೆ ಸಂಖ್ಯೆ:03/2023ರಲ್ಲಿನ ವಿಚಾರಣೆ/ತನಿಖೆಯನ್ನು ಬಾಕಿ ಇರಿಸಿ ಸದರಿಯವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(ಎಎ) ರನ್ವಯ ಸರ್ಕಾರಿ ಸೇವೆಯಿಂದ ಸರ್ಕಾರ ಆದೇಶ ಸಂಖ್ಯೆ:ಲೋಇ 391 ಸೇಇವಿ 2023, ದಿನಾಂಕ:18.10.2023ರಂದು ಅಮಾನತ್ತುಗೊಳಿಸಿ ಆದೇಶಿಸಲಾಗಿದೆ. |
| 4 | ಶ್ರೀ ಅಮೀನ ಮುಕ್ತಾರ್ ಅಹ್ಮದ್, ಅಧೀಕ್ಷಕ ಇಂಜಿನಿಯರ್, ಬಳ್ಳಾರಿ ವೃತ್ತ, ಬಳ್ಳಾರಿ ಇವರು ಅವರ ಬಲ್ಲಮೂಲಗಳ ಆದಾಯಕ್ಕಿಂತ ಹೆಚ್ಚಿನ ಅಕ್ರಮ ಸಂಪತ್ತು ಹೊಂದಿರುತ್ತಾರೆ ಎಂಬ ನಂಬಲಾರ್ಹ ಮಾಹಿತಿಯ ಆಧಾರದ ಮೇರೆಗೆ ಸದರಿಯವರ ವಿರುದ್ಧ ಬಳ್ಳಾರಿ ಲೋಕಾಯುಕ್ತ ಪೊಲೀಸ್ ಠಾಣೆಯ ಮೊ.ಸಂ.03/2025 ಕಲಂ-13(1)(ಬಿ) ಸಹಿತ 13(2) ಪಿ.ಸಿ.ಕಾಯ್ದೆ-1988 (ತಿದ್ದುಪಡಿ ಕಾಯ್ದೆ-2018)ರ ರೀತ್ಯಾ ದಿನಾಂಕ:29.05.2025ರಂದು ಪ್ರಕರಣವನ್ನು ದಾಖಲಿಸಿಕೊಂಡು ಇಲ್ಲಿಯವರೆಗೂ ನಡೆಸಿದ ಶೋಧನೆ/ತನಿಖೆಯಿಂದ ಆರೋಪಿತರ ಅಕ್ರಮ ಆಸ್ತಿ ಸಂಪಾದನೆಯು ಶೇ.272.59ರಷ್ಟು ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನೆಲೆಯಲ್ಲಿ, ಸದರಿಯವರ ಲೀನ್‌ನ್ನು ಬದಲಾಯಿಸುವಂತೆ ಮಾನ್ಯ ಲೋಕಾಯುಕ್ತ ಸಂಸ್ಥೆಯಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ. |
| 5 | ಶ್ರೀ ಪಿ.ವಿಜಯಕುಮಾರ್, ಸಹಾಯಕ ಇಂಜಿನಿಯರ್ ಇವರು ಮೂಲತಃ ಲೋಕೋಪಯೋಗಿ ಇಲಾಖೆ ಅಧಿಕಾರಿಯಾಗಿದ್ದು, ಸದರಿಯವರು ಈ ಹಿಂದೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಗಂಗಾವತಿ, ಕೊಪ್ಪಳ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರ ಬಲ್ಲಮೂಲಗಳ ಆದಾಯಕ್ಕಿಂತ ಹೆಚ್ಚಿನ ಅಕ್ರಮ ಸಂಪತ್ತು ಹೊಂದಿರುತ್ತಾರೆಂಬ ನಂಬಲಾರ್ಹ ಆರೋಪದ ಮೇರೆಗೆ ಸದರಿಯವರ ವಿರುದ್ಧ ಕೊಪ್ಪಳ ಎಸಿಬಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:03/2018ರ ಪ್ರಕರಣವನ್ನು ದಾಖಲಿಸಿಕೊಂಡು ದಿನಾಂಕ:08.03.2018 ಮತ್ತು 09.03.2018ರಲ್ಲಿ ದಾಳಿ ನಡೆಸಿದ್ದು, ಇವರ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಸರ್ಕಾರದ ಆದೇಶ ಸಂಖ್ಯೆ:ಲೋಇ 08 ಸೇವಿಇ 2022, ದಿನಾಂಕ:24.08.2023 ರಲ್ಲಿ ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಲಾಗಿದೆ. |

| | |
|---|---|
| 6 | ಶ್ರೀ ಸುರೇಶ್ ಮೋರೆ, ಕಿರಿಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಬಸವ ಕಲ್ಯಾಣ, ಬೀದರ್ ಇವರ ವಿರುದ್ಧ ಬಲ್ಲಮೂಲಗಳಿಗಿಂತ ಹೆಚ್ಚಿನ ಅಕ್ರಮ ಆಸ್ತಿಯನ್ನು ಹೊಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ದಿಂದ ಪ್ರಸ್ತಾವನೆ ಸ್ವೀಕೃತ ವಾಗಿದ್ದು, ಅಭಿಯೋಜನೆ ಮಂಜೂರಾತಿ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ (ಕಿರಿಯ ಇಂಜಿನಿಯರ್ ವೃಂದದ ಶಿಸ್ತು ಪ್ರಾಧಿಕಾರ ಮುಖ್ಯ ಇಂಜಿನಿಯರ್, ಸಂ&ಕ(ದ), ಬೆಂಗಳೂರು ರವರಾಗಿರುತ್ತಾರೆ). |

ಲೋಇ 466 ಸೇಇವಿ 2025

*********